

# ‘ಲೈಕು’ಗಳೆಂಬ ಮಿಥ್ಯಾ ಲೋಕದಲ್ಲಿ..

ರಾಜಕೀಯದವರದ್ದೋ, ಸಿನಿಮಾ ನಟಿಯರದ್ದೋ ಹುಟ್ಟುಹಬ್ಬ ಇದ್ದಾಗ ‘ಅವರಿಗೆ ಶುಭ ಹಾರೈಸಿ’ ಎನ್ನುವ ಮೆಸೇಜುಗಳು ಹರಿದಾಡುತ್ತವೆ. ಅದನ್ನು ನೋಡಿದವರೆಲ್ಲಾ ವಿಶ್ ಮಾಡಿದ್ದೇ ಮಾಡಿದ್ದು. ಇವರ ಸಾವಿರಾರು ಶುಭಹಾರೈಕೆಗಳನ್ನು ಆ ವ್ಯಕ್ತಿಗಳು ನೋಡುವುದು ಸಾಧ್ಯವೇ?

■ ಕೆ.ಪಿ. ಸತ್ಯನಾರಾಯಣ

ಮೊನ್ನೆ ಫೇಸ್‌ಬುಕ್‌ನ ‘ಪ್ರೊಫೈಲ್ ಪಿಕ್ಚರ್’ ಬದಲಾಯಿಸಿದೆ. ಎರಡು ದಿನಗಳಲ್ಲೇ ನೂರಾರು ಲೈಕುಗಳು ಬಂದು ಬಿದ್ದವು. ಈಗ್ಗೆ ಹದಿನೈದು ದಿನಗಳ ಹಿಂದೊಮ್ಮೆ ಪ್ರೊಫೈಲ್ ಪಿಕ್ಚರ್ ಬದಲಾಯಿಸಿದ್ದೆ. ಆಗಲೂ ಹೀಗೆಯೇ ಲೈಕುಗಳು ಬಂದಿದ್ದವು. ತಮಾಷೆ ಎಂದರೆ ಮೊನ್ನೆ ಪ್ರೊಫೈಲ್ ಪಿಕ್ಚರ್ ಬದಲಾಯಿಸುವ ಉದ್ದೇಶವೇ ಇರಲಿಲ್ಲ. ಎರಡು ವರ್ಷಗಳ ಹಿಂದೆ ದುಬೈನ ವಿಮಾನದಲ್ಲಿ ಕುಳಿತ ಫೋಟೊವನ್ನು ‘ಇಂದಿನ ದಿನದ ನಿಮ್ಮ ನೆನಪಿನ ಚಿತ್ರ’ ಎಂದು ಫೇಸ್‌ಬುಕ್ ತೋರಿಸುತ್ತಿತ್ತು. ‘ನಿಮ್ಮ ಪ್ರೊಫೈಲ್ ಪಿಕ್ಚರ್ ಮಾಡಿಕೊಳ್ಳಿ’ ಎನ್ನುವ ಆಯ್ಕೆಯನ್ನು ತಪ್ಪಿ ಒತ್ತಿಬಿಟ್ಟೆ. ನನ್ನ ಪ್ರೊಫೈಲ್ ಪಿಕ್ಚರ್ ಬದಲಾಗಿ ಹೋಗಿತ್ತು. ಕೆಲವರು, ಇವನಿಗೇನು ಬಂತು ಮೂರು ಮೂರು ದಿನಕ್ಕೂ ಪ್ರೊಫೈಲ್ ಪಿಕ್ಚರ್ ಬದಲಾಯಿಸುತ್ತಾನೆ ಎಂದು ಬೈದುಕೊಂಡೂ ಲೈಕ್ ಒತ್ತಿದ್ದರು. ಇನ್ನು ಕೆಲವರು ಇರಲಿ ಪಾಪ ಎಂದೋ, ನನಗೆ ಇವನು ಲೈಕು ಒತ್ತುತ್ತಿರುತ್ತಾನೆ ಎಂದೋ ಲೈಕಿಸಿದ್ದರು!

ಅಂದಿನಿಂದ ಈ ಲೈಕುಗಳ ಬಗ್ಗೆಯೇ ಯೋಚಿಸುತ್ತಿದ್ದೆ. ಲೈಕುಗಳ ಲೋಕದ ಒಳಹೊಕ್ಕಷ್ಟೂ ಕುತೂಹಲಕಾರಿ ಅಂಶಗಳು ಹೊರಬರತೊಡಗಿದವು!

ಒಂದು ಪತ್ರಿಕೆಯ ಸಂಪಾದಕರೊಬ್ಬರು ನನ್ನ ಫ್ರೆಂಡ್ಸ್ ಲಿಸ್ಟ್‌ನಲ್ಲಿದ್ದಾರೆ. ತಾತ ಆಗಿದ್ದರೂ ಇನ್ನೂ ಕಳೆಕಳೆಯಾಗಿದ್ದಾರೆ. ಹಾಗಾಗಿ ಆಗಾಗ್ಗೆ ತಮ್ಮ ಪ್ರೊಫೈಲ್ ಪಿಕ್ಚರ್ ಬದಲಾಯಿಸುತ್ತಿರುತ್ತಾರೆ. ಅವರೊಮ್ಮೆ ತಮ್ಮ ಪ್ರೊಫೈಲ್ ಪಿಕ್ಚರ್ ಬದಲಾಯಿಸಿದಾಗ ಸ್ವಲ್ಪ ಅಟ್ಟಕ್ಕೇರಿಸಿ ಕಾಮೆಂಟ್ ಹಾಕಿಬಿಟ್ಟೆ. ಅವರು ಖುಷಿ ಪಟ್ಟರೋ, ಸಿಟ್ಟು ಮಾಡಿಕೊಂಡರೋ ತಿಳಿಯಲಿಲ್ಲ. ನನ್ನ ಫೋಟೋಗಳನ್ನು ನೋಡಿ ಲೈಕು ಮಾಡುತ್ತಿದ್ದ ಅವರು ಇದ್ದಕ್ಕಿದ್ದಂತೆ ನೋಡಿಯೂ ನೋಡದಂತೆ ಉಳಿದುಬಿಟ್ಟರು. ಅವರು ತಪ್ಪು ತಿಳಿದುಕೊಂಡರೇನೋ ಅನ್ನಿಸಿ ಮತ್ತೊಂದು ಕಾಮೆಂಟ್ ಹಾಕಿದೆ– ‘ನಿಮ್ಮ ಚಿತ್ರವನ್ನು ನೋಡಿದ ತಕ್ಷಣಕ್ಕೆ ಅನ್ನಿಸಿದ್ದನ್ನು ಬರೆದೆ ಅಷ್ಟೆ. ಅದರಲ್ಲಿ ಬೇರೇನೂ ಉದ್ದೇಶವಿಲ್ಲ’ ಎಂದು. ಆಗಾಗ್ಗೆ ನನ್ನ ಚಿತ್ರಲೇಖನ, ಕಥೆ, ಹಾಸ್ಯಲೇಖನಗಳನ್ನು ಪ್ರಕಟಿಸುತ್ತಿದ್ದ ಅವರು ಆನಂತರ ನಾನು ಕಳಿಸಿದ ಲೇಖನಗಳನ್ನು ಪ್ರಕಟಿಸುವುದಿರಲಿ, ಪರಿಶೀಲಿಸುವುದನ್ನೂ ಬಿಟ್ಟುಬಿಟ್ಟರು! ನಾನು ಸಮಜಾಯಿಷಿ ಕೊಡದೆ ಸುಮ್ಮನಿದ್ದರೇ ಒಳ್ಳೆಯದಿತ್ತೇನೋ ಎಂದು ಆಮೇಲೆ ಅನ್ನಿಸಿತು!

ಕೆಲವರು ವಿವಾದಗಳಿಗೆ ಎಡೆ ಮಾಡಿಕೊಡುವ, ಸಮಾಜದ ಸ್ವಾಸ್ಥ್ಯ ಕೆಡಿಸುವ, ರಾಜಕೀಯ ವ್ಯಕ್ತಿಗಳಿಗೆ ಸಂಬಂಧಪಟ್ಟ ವೈಯಕ್ತಿಕ ವಿಷಯಗಳ ಬಗ್ಗೆ, ಪೋಸ್ಟ್ ಹಾಕುತ್ತಿರುತ್ತಾರೆ. ಅವರಿಗೆ ತಾವೇನು ಮಾಡುತ್ತಿದ್ದೇವೆಂಬ ಅರಿವಿರುವುದಿಲ್ಲ. (ದೇವನು ಅವರನ್ನು ಕ್ಷಮಿಸಲಿ!) ಆದರೆ ಅಂತಹ ಪೋಸ್ಟ್‌ಗಳನ್ನು ಲೈಕ್ ಮಾಡಿದ, ಕಾಮೆಂಟ್ ಹಾಕಿದ ವ್ಯಕ್ತಿಗಳು ತೊಂದರೆಗೆ ಸಿಕ್ಕಿಕೊಳ್ಳುವ ಪರಿಸ್ಥಿತಿ ಕೆಲವೊಮ್ಮೆ ಎದುರಾಗುವುದುಂಟು. ರಾಜಕಾರಣಿಯೊಬ್ಬರಿಗೆ ಸಂಬಂಧಪಟ್ಟ ವಿಷಯವೊಂದು ವಿವಾದಕ್ಕೆ ಕಾರಣವಾಗಿತ್ತು. ಅದನ್ನು ಹಾಕಿದವನ, ಹಂಚಿಕೊಂಡವರ ವಿವರವನ್ನು



ವಿನ್ಯಾಸ: ದಿಲ್